# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1170

ಮಾನ್ಯ ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ: : 30.09.2020

ಉತ್ತರಿಸುವ ಮಾನ್ಯ ಸಚಿವರು : ಮಾನ್ಯ ಕೃಷಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಜಾರಿಗೆ ತಂದಿದ್ದು, ರಾಜ್ಯದಲ್ಲಿ ಇದನ್ನು ಅನುಷ್ಠಾನಗೊಳಿಸಲಾಗಿದೆಯೇ; | ಹೌದು, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, 2016–17ನೇ ಸಾಲಿನ ಮುಂಗಾರು ಹಂಗಾಮಿನಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ರಾಜ್ಯದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. |
| ಆ) | ಈ ಪ್ರಧಾನಮಂತ್ರಿ ಫಸಲು ಬಿಮಾ ಯೋಜನೆಯಡಿಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ 2017–18, 2018–19, 2019–20 ರಲ್ಲಿ ಎಷ್ಟು ಜನ ರೈತರು ನೋಂದಾಯಿಸಿಕೊಂಡಿದ್ದಾರೆ; | ಬೆಳಗಾವಿ ಜಿಲ್ಲೆಯಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ 2017–18 ರಿಂದ 2019–20 ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ನೋಂದಾಯಿಸಿಕೊಂಡಿರುವ ರೈತರ ವಿವರ ಈ ಕೆಳಗಿನಂತಿದೆ. |

| ವರ್ಷ | ಹಂಗಾಮು | ರೈತರ ಸಂಖ್ಯೆ |
|---|---|---|
| 2017 | ಮುಂಗಾರು | 46231 |
| 2017–18 | ಹಿಂಗಾರು ಮತ್ತು ಬೇಸಿಗೆ | 472 |
| 2018 | ಮುಂಗಾರು | 59157 |
| 2018–19 | ಹಿಂಗಾರು ಮತ್ತು ಬೇಸಿಗೆ | 40202 |
| 2019 | ಮುಂಗಾರು | 33339 |
| 2019–20 | ಹಿಂಗಾರು ಮತ್ತು ಬೇಸಿಗೆ | 32135 |

| | | |
|---|---|---|
| ಇ) | ಈ ನೋಂದಾಯಿತ ರೈತರು ಪಾವತಿ ಮಾಡಿದ ಕಂತಿನ ಮೊತ್ತವೆಷ್ಟು; | ಬೆಳಗಾವಿ ಜಿಲ್ಲೆಯಲ್ಲಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ 2017-18 ರಿಂದ 2019-20 ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ನೋಂದಾಯಿತ ರೈತರು ಪಾವತಿ ಮಾಡಿದ ಕಂತಿನ ಮೊತ್ತದ ವಿವರ ಈ ಕೆಳಗಿನಂತಿದೆ. |

ರೂ. ಲಕ್ಷಗಳಲ್ಲಿ

| ವರ್ಷ | ಹಂಗಾಮು | ರೈತರು ಪಾವತಿ ಮಾಡಿದ ಕಂತಿನ ಮೊತ್ತ |
|---|---|---|
| 2017 | ಮುಂಗಾರು | 511.24 |
| 2017-18 | ಹಿಂಗಾರು ಮತ್ತು ಬೇಸಿಗೆ | 4.64 |
| 2018 | ಮುಂಗಾರು | 628.66 |
| 2018-19 | ಹಿಂಗಾರು ಮತ್ತು ಬೇಸಿಗೆ | 284.74 |
| 2019 | ಮುಂಗಾರು | 323.45 |
| 2019-20 | ಹಿಂಗಾರು ಮತ್ತು ಬೇಸಿಗೆ | 191.65 |

| | | |
|---|---|---|
| ಈ) | ಬೆಳೆ ಹಾನಿಯಾದ ಸಂದರ್ಭದಲ್ಲಿ ಮೂರು ವರ್ಷಗಳ ಅವಧಿಯಲ್ಲಿ ವಿಮಾ ಸಂಸ್ಥೆಗಳು ಹಾನಿಗೊಳಗಾದ ರೈತರಿಗೆ ನೀಡಿದ ಪರಿಹಾರದ ಮೊತ್ತವೆಷ್ಟು; | ಬೆಳಗಾವಿ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ 2017-18 ರಿಂದ 2019-20 ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ವಿಮಾ ಸಂಸ್ಥೆಗಳು ಹಾನಿಗೊಳಗಾದ ರೈತರಿಗೆ ನೀಡಿದ ಪರಿಹಾರದ ಮೊತ್ತದ ವಿವರ. |

ರೂ. ಲಕ್ಷಗಳಲ್ಲಿ.

| ವರ್ಷ | ಹಂಗಾಮು | ಬಿತ್ತನೆ ವಿಫಲಗೊಂಡಲ್ಲಿ / ಮೊಳಕೆ ಬಾರದ್ದಿರೆ | ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪ | ಮಧ್ಯಂತರ ಪ್ರತಿಕೂಲತೆ | ಬೆಳೆ ಕಟಾವು ಪ್ರಯೋಗಗಳ ಇಳುವರಿ ಆಧಾರದನ್ವಯ | ಒಟ್ಟು |
|---|---|---|---|---|---|---|
| 2017 | ಮುಂಗಾರು | 11.81 | - | - | 333.66 | 345.47 |
| 2017-18 | ಹಿಂಗಾರು ಮತ್ತು ಬೇಸಿಗೆ | - | - | - | 8.95 | 8.95 |
| 2018 | ಮುಂಗಾರು | - | - | - | 994.57 | 994.57 |
| 2018-19 | ಹಿಂಗಾರು ಮತ್ತು ಬೇಸಿಗೆ | - | - | - | 1977.57 | 1977.57 |
| 2019 | ಮುಂಗಾರು | - | - | 542.86 | - | 542.86 |

| | | |
|---|---|---|
| | | 2019-20 ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ಸಮೀಕ್ಷೆಯ ದಾಖಲೆಯ ವಿವರಗಳು ಅಂತಿಮ ಹಂತದ ಕ್ರೂಢೀಕರಣ ಪ್ರಕ್ರಿಯೆ ಜಾರಿಯಲ್ಲಿದ್ದು, ಸದರಿ ದತ್ತಾಂಶವು ಅಂತಿಮಗೊಂಡ ನಂತರ ಸಂರಕ್ಷಣೆ ತಂತ್ರಾಂಶದಲ್ಲಿ ಬೆಳೆ ನೋಂದಣಿಯಾದ ಪ್ರಸ್ತಾವನೆಗಳೊಂದಿಗೆ ತಾಳೆ ಮಾಡಲು ಪರಿಗಣಿಸಲಾಗುವುದು. ನೋಂದಣಿ ಮಾಡಿಸಿದ ರೈತರಿಗೆ ಬೆಳೆ ಕಟಾವು ಪ್ರಯೋಗಗಳ ವರದಿಯ ಆಧಾರದ ಮೇರೆಗೆ ಬೆಳೆ ವಿಮೆ ಪರಿಹಾರವನ್ನು ಸಂರಕ್ಷಣೆ ತಂತ್ರಾಂಶದಲ್ಲಿ ಪ್ರಾರಂಭ ಮಾಡಲಾಗುವುದು. |
| ಉ) | ವಿಮೆಯ ಪರಿಹಾರಕ್ಕಾಗಿ ರೈತರು ಮನವಿ ಮಾಡಿದ್ದರೂ ವಿವಿಧ ಕಾರಣಗಳಿಗಾಗಿ ಬಾಕಿ ಉಳಿಸಿಕೊಂಡಿರುವ ಪ್ರಕರಣಗಳೆಷ್ಟು; | 2017ರ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಬೆಳೆ ವಿಮೆ ಯೋಜನೆಯಡಿ ನೊಂದಾಯಿಸಿದ ಎಲ್ಲಾ ಅರ್ಹ ರೈತರಿಗೆ ವಿಮಾ ಪರಿಹಾರವನ್ನು ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸಲಾಗಿದೆ, ಯಾವುದೇ ಬೆಳೆ ವಿಮೆ ಪರಿಹಾರವು ಬಾಕಿ ಇರುವುದಿಲ್ಲ.<br><br>2018ರ ಮುಂಗಾರು ಹಂಗಾಮಿನಲ್ಲಿ 102 ಪ್ರಕರಣಗಳಿಗೆ ಹಾಗೂ 2018-19 ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ 11 ಪ್ರಕರಣಗಳಿಗೆ ಬ್ಯಾಂಕ್ ಖಾತೆ ಮತ್ತು ಆಧಾರ್ ಸಂಖ್ಯೆ ತಪ್ಪಾಗಿರುವುದರಿಂದ ಬಾಕಿ ಇರುತ್ತದೆ. (NEFT Rejected), ವಿಮಾ ಸಂಸ್ಥೆಯವರಿಂದ ಇತ್ಯರ್ಥ ಪಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>2019ರ ಮುಂಗಾರು ಹಂಗಾಮಿನಲ್ಲಿ 5444 ಪ್ರಕರಣಗಳಿಗೆ ಆಧಾರ್ ಸಂಖ್ಯೆ ಬ್ಯಾಂಕ್ ಖಾತೆಗೆ ಲಿಂಕ್ ಆಗದೆ ಇರುವ ಕಾರಣ / Account reached maximum Credit limit set on account/ A/c Blocked or Frozen / Inactive Aadhaar ಕಾರಣಗಳಿಂದ ಬಾಕಿ ಇರುವ ವಿಮಾ ಪರಿಹಾರ ಮೊತ್ತವನ್ನು ಅನುಷ್ಠಾನ ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸುವ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ. |
| ಊ) | ಸಕಾಲಕ್ಕೆ ರೈತರಿಗೆ ಕಾರಣ ನೀಡಿ ಪರಿಹಾರ ಪಾವತಿ ಮಾಡದಿರುವ ವಿಮಾ ಸಂಸ್ಥೆಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? | PMFBY ಮಾರ್ಗಸೂಚಿಯನ್ವಯ ಲೆಕ್ಕ ಹಾಕಿದ ನಂತರ, ವಿಮಾ ಸಂಸ್ಥೆಯವರು ರೈತರು ನೋಂದಣಿ ಸಮಯದಲ್ಲಿ ನೀಡಿರುವ ಆಧಾರ್ ಮತ್ತು ಬ್ಯಾಂಕ್ ಖಾತೆಗಳ ವಿವರದ ಆಧಾರದ ಮೇಲೆ ಅರ್ಹ ಫಲಾನುಭವಿಗಳಿಗೆ ಮೊದಲನೆ ಹಂತದಲ್ಲಿ ಆಧಾರ್ ಮುಖಾಂತರ ವಿಮಾ ಮೊತ್ತ ಇತ್ಯರ್ಥಪಡಿಸುತ್ತಾರೆ. ಅದರಲ್ಲಿ ಆಧಾರ್ ಸಂಖ್ಯೆ ಬ್ಯಾಂಕ್ ಖಾತೆಗೆ ಲಿಂಕ್ ಆಗದೆ ಇರುವ ಕಾರಣ / Account reached maximum Credit |

| | | |
|---|---|---|
| | | limit set on account/ A/c Blocked or Frozen / Inactive Aadhaar / 96 Aadhaar mapping does not exist ಕಾರಣಗಳಿಂದಾಗಿ ವಿಮೆ ಪರಿಹಾರ ಮೊತ್ತ ಇತ್ಯರ್ಥ ವಿಫಲಗೊಂಡ ರೈತರಿಗೆ ಎರಡನೆ ಹಂತದಲ್ಲಿ ರೈತರ ಬ್ಯಾಂಕ್ ಖಾತೆಗೆ NEFT ಮುಖಾಂತರ ವಿಮಾ ಮೊತ್ತ ಇತ್ಯರ್ಥಪಡಿಸಲಾಗುತ್ತದೆ.<br><br>ಅದರಲ್ಲಿಯೂ ಸಹ ಬ್ಯಾಂಕ್ ಖಾತೆ ಸಂಖ್ಯೆಯೂ ತಪ್ಪಾಗಿರುವುದರಿಂದ / Closed account/ Inactive account / NEFT rejected ಕಾರಣಗಳಿಂದ ವಿಮೆ ಪರಿಹಾರ ಮೊತ್ತ ಇತ್ಯರ್ಥವು ವಿಫಲಗೊಂಡಿರುತ್ತದೆ.<br><br>ಈ ಎರಡು ಸಂಧರ್ಭದಲ್ಲಿ ವಿಮಾ ಮೊತ್ತ ಪಾವತಿಯಾಗದೇ ವಿಫಲಗೊಂಡ ರೈತರಿಗೆ ವಿಮಾ ಸಂಸ್ಥೆಗಳು ಸರಿಯಾದ ಖಾತೆಯ ವಿವರಗಳನ್ನು ರೈತರಿಂದ ಪಡೆದು ವಿಮಾ ಮೊತ್ತ ಇತ್ಯರ್ಥಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br><br>ಈ ಎಲ್ಲಾ ಕಾರಣಗಳಿಂದ ವಿಮೆ ಪರಿಹಾರ ಮೊತ್ತ ಇತ್ಯರ್ಥ ಪ್ರಕ್ರಿಯೆಯು ವಿಳಂಬವಾಗಿರುತ್ತದೆ. |

**ಸಂಖ್ಯೆ:- ಕೃಇ/119/ಕೃಕೈಉ/2020**

(ಬಿ.ಸಿ.ಪಾಟೀಲ್)
**ಕೃಷಿ ಸಚಿವರು**